**ಕರ್ನಾಟಕ ವಿಧಾನ ಪರಿಷತ್ತು**

ದಿನಾಂಕ: 05ನೇ ಜೂನ್ 2017
ಸೋಮವಾರ.

**ವಿಷಯಾನುಕ್ರಮಣಿಕೆ**

1. **ನೂತನ ಸದಸ್ಯರ ಪ್ರಮಾಣ ವಚನ**
2. **ಸಂತಾಪ ಸೂಚನೆ**

   ವಿಧಾನ ಪರಿಷತ್ತಿನ ಉಪ ಸಭಾಪತಿಯವರಾಗಿದ್ದ ಹಾಗೂ ಹಾಲಿ ಸದಸ್ಯರಾಗಿದ್ದ ಶ್ರೀಮತಿ ವಿಮಲಾಗೌಡ, ಹಿರಿಯ ಸ್ವಾತಂತ್ರ್ಯ ಹೋರಾಟಗಾರರು ಹಾಗೂ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷರಾಗಿದ್ದ ಡಾ: ಹೊ.ಶ್ರೀನಿವಾಸಯ್ಯ, ಖ್ಯಾತ ಹಿರಿಯ ಸಂಸ್ಕೃತ ವಿದ್ವಾಂಸರಾದ ಪ್ರೊ: ಕೆ.ಟಿ. ಪಾಂಡುರಂಗಿ, ಹಿರಿಯ ಪತ್ರಕರ್ತರಾಗಿದ್ದ ಶ್ರೀ ಗರುಡನಗಿರಿ ನಾಗರಾಜ ಹಾಗೂ ಶ್ರೀಮತಿ ಪಾರ್ವತಮ್ಮ ರಾಜ್‌ಕುಮಾರ್ ಇವರುಗಳ ನಿಧನದ ಬಗ್ಗೆ.

3. **ಪ್ರಕಟಣೆಗಳು.**

– – – – –

(537) 11–40 5–6–2017 ಪಿಕೆ / ಆರ್‌ಎನ್

**ಕರ್ನಾಟಕ ವಿಧಾನ ಪರಿಷತ್ತು**

**ಸೋಮವಾರ, *5ನೇ ಜೂನ್ 2017***

**ಸದನವು ವಿಧಾನಪರಿಷತ್ತಿನ ಸಭಾಂಗಣದಲ್ಲಿ**

**ಬೆಳಿಗ್ಗೆ 11 ಗಂಟೆ 43 ನಿಮಿಷಕ್ಕೆ ಸಮಾವೇಶಗೊಂಡಿತು.**

**ಸಭಾಪತಿ (ಶ್ರೀ ಡಿ.ಹೆಚ್.ಶಂಕರಮೂರ್ತಿ) ಯವರು**

**ಪೀಠದಲ್ಲಿ ಉಪಸ್ಥಿತರಿದ್ದರು.**

**(ಸದನವು ವಂದೇ ಮಾತರಂ ರಾಷ್ಟ್ರಗಾನದೊಂದಿಗೆ ಪ್ರಾರಂಭವಾಯಿತು)**

**ಸಭಾಪತಿಯವರು:–** ನಮ್ಮ ವಿಧಾನಪರಿಷತ್ತಿನಲ್ಲಿ ಕಳೆದ ಕೆಲವು ದಿನಗಳಿಂದ ಖಾಲಿ ಉಳಿದಿದ್ದ 3 ಸ್ಥಾನಗಳ ಪೈಕಿ 2 ಸ್ಥಾನಗಳಿಗೆ ಸರ್ಕಾರದ ಶಿಫಾರಸ್ಸಿನ ಮೇರೆಗೆ ಘನತೆವೆತ್ತ ರಾಜ್ಯಪಾಲರು ಇಬ್ಬರು ಸದಸ್ಯರನ್ನು ನಾಮನಿರ್ದೇಶನ ಮಾಡಿ ಕಳುಹಿಸಿಕೊಟ್ಟಿದ್ದಾರೆ. ಅವರಿಬ್ಬರೂ ಮೊದಲಿಗೆ ಪ್ರಮಾಣ ವಚನ ಸ್ವೀಕಾರ ಮಾಡುತ್ತಾರೆ. ಮೊದಲಿಗೆ ಶ್ರೀ ಮೋಹನ್‌ಕುಮಾರ್ ಕೊಂಡಜ್ಜಿರವರು.

## 1. ನೂತನ ಸದಸ್ಯರ ಪ್ರಮಾಣ ವಚನ

**ಶ್ರೀ ಮೋಹನ್‌ಕುಮಾರ್ ಕೊಂಡಜ್ಜಿ(ನಾಮನಿರ್ದೇಶಿತರು):–** "ಶ್ರೀ ಮೋಹನ್‌ಕುಮಾರ್ ಕೊಂಡಜ್ಜಿ ಎಂಬ ಹೆಸರಿನವನಾದ ನಾನು ವಿಧಾನಪರಿಷತ್ತಿನ ಸದಸ್ಯನಾಗಿ, ನಾಮ ನಿರ್ದೇಶನ ಹೊಂದಿದವನಾಗಿ ವಿಧಿದ್ವಾರ ಸ್ಥಾಪಿತವಾದ ಭಾರತದ ಸಂವಿಧಾನದ ವಿಷಯದಲ್ಲಿ ಶ್ರದ್ಧೆಯಿಂದಲೂ, ನಿಷ್ಠೆಯಿಂದಲೂ ಕೂಡಿರುತ್ತೇನೆಂದೂ, ನಾನು ಭಾರತದ ಪರಮಾಧಿಕಾರವನ್ನು ಮತ್ತು ಸಮಗ್ರತೆಯನ್ನು ಸಮರ್ಥಿಸುತ್ತೇನೆಂದೂ, ನಾನು ಈಗ ಕೈಗೊಳ್ಳಲಿರುವ ಕರ್ತವ್ಯವನ್ನು ಶ್ರದ್ಧಾಪೂರ್ವಕವಾಗಿ ನಿರ್ವಹಿಸುತ್ತೇನೆಂದೂ ಸತ್ಯ ನಿಷ್ಠೆಯಿಂದ ಪ್ರತಿಜ್ಞೆ ಮಾಡುತ್ತೇನೆ".

(538)05-06-2017 MM-VK 11.50

**ಶ್ರೀ ಪಿ.ಆರ್.ರಮೇಶ್ (ನಾಮನಿರ್ದೇಶಿತರು):–** "ಪಿ.ಆರ್.ರಮೇಶ್ ಎಂಬ ಹೆಸರಿನವನಾದ ನಾನು ವಿಧಾನಪರಿಷತ್ ಸದಸ್ಯನಾಗಿ ನಾಮನಿರ್ದೇಶನ ಹೊಂದಿದವನಾಗಿ ವಿಧಿದ್ವಾರ ಸ್ಥಾಪಿತವಾದ ಭಾರತದ ಸಂವಿಧಾನದ ವಿಷಯದಲ್ಲಿ ಶ್ರದ್ಧೆಯಿಂದಲೂ, ನಿಷ್ಠೆಯಿಂದಲೂ ಕೂಡಿರುತ್ತೇನೆಂದು ನಾನು ಭಾರತದ ಪರಮಾಧಿಕಾರವನ್ನು ಮತ್ತು ಸಮಗ್ರತೆಯನ್ನು ಸಮರ್ಥಿಸುತ್ತೇನೆಂದು ನಾನು ಈಗ ಕೈಗೊಳ್ಳಲಿರುವ ಕರ್ತವ್ಯವನ್ನು ಶ್ರದ್ಧಾಪೂರ್ವಕವಾಗಿ ನಿರ್ವಹಿಸುತ್ತೇನೆಂದು ಭಗವಂತನ ಹೆಸರಿನ ಮೇಲೆ ಪ್ರಮಾಣ ಮಾಡುತ್ತೇನೆ".

**ಸಭಾಪತಿಯವರು:–** ನೂತನ ಸದಸ್ಯರಿಗೆ ಸ್ವಾಗತವನ್ನು ಕೋರುತ್ತೇನೆ, ಧನ್ಯವಾದಗಳು.

## 2. ಸಂತಾಪ ಸೂಚನೆ

**ವಿಷಯ:–** ವಿಧಾನಪರಿಷತ್ತಿನ ಮಾಜಿ ಉಪ ಸಭಾಪತಿಯವರಾಗಿದ್ದ ಹಾಗು ಹಾಲಿ ಸದಸ್ಯರಾಗಿದ್ದ ಶ್ರೀಮತಿ ವಿಮಲಾಗೌಡ, ಹಿರಿಯ ಸ್ವಾತಂತ್ರ್ಯ ಹೋರಾಟಗಾರರು ಹಾಗೂ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷರಾಗಿದ್ದ ಡಾ: ಹೊ. ಶ್ರೀನಿವಾಸಯ್ಯ, ಖ್ಯಾತ ಹಿರಿಯ ಸಂಸ್ಕೃತ ವಿದ್ವಾಂಸರಾದ ಪ್ರೊ.

ಕೆ.ಟಿಪಾಂಡುರಂಗಿ, ಹಿರಿಯ ಪತ್ರಕರ್ತರಾಗಿದ್ದ ಶ್ರೀ ಗರುಡನಗಿರಿ ನಾಗರಾಜ ಹಾಗೂ ಶ್ರೀಮತಿ ಪಾರ್ವತಮ್ಮ ರಾಜ್‌ಕುಮಾರ್ ಇವರುಗಳ ನಿಧನದ ಬಗ್ಗೆ.

– – – –

**ಸಭಾಪತಿಯವರು:–** ಈ ಸದನವು ಬಜೆಟ್ ಅಧಿವೇಶನದ ಮುಂದುವರೆದ ಅಧಿವೇಶನವಾಗಿದೆ. ಸ್ವಲ್ಪ ದಿವಸಗಳ ಮಧ್ಯೆ ಸದನವನ್ನು ನಡೆಸಲಿಲ್ಲ.

**(ಈ ಹಂತದಲ್ಲಿ ಸದನದಲ್ಲಿ ಮಾನ್ಯ ಸದಸ್ಯರೊಬ್ಬರ ಮೊಬೈಲ್ ಫೋನ್ ರಿಂಗಣಿಸಿತು)**

ಸದನ ನಡೆಯುವಾಗ ಮೊಬೈಲ್ ಫೋನ್ ಬಳಸುವುದು ಒಳ್ಳೆಯ ಪದ್ಧತಿಯಲ್ಲ. ಇದು ಸದನ ನಡೆಯುವ ಮೊದಲನೆ ದಿವಸವಾಗಿದೆ. ಬೇರೆ ದಿನವಾಗಿದ್ದರೆ ಮೊಬೈಲ್ ಫೋನ್ ಅನ್ನು ವಶಕ್ಕೆ ಪಡೆದುಬಿಡುತ್ತಿದ್ದೆ. ದಯವಿಟ್ಟು ಸಹಕರಿಸಿ. ಸದನದೊಳಗೆ ಬರುವಾಗ ಮೊಬೈಲ್ ಫೋನ್ ಅನ್ನು ಸ್ವಿಚ್ ಆಫ್ ಮಾಡಿಕೊಂಡು ಬನ್ನಿ. ನಮ್ಮ ದೌರ್ಭಾಗ್ಯವಶಾತ್ ಕೆಲವು ಗಣ್ಯರು ನಮ್ಮನ್ನು ಅಗಲಿದ್ದಾರೆ. ಅದರಲ್ಲಿ ಒಬ್ಬರೆಂದರೆ, ಭಾವನಾಪೂರ್ವಕವಾಗಿ ಹೇಳುವುದಾದರೆ, ನಾನು ಈ ಸದನದ ಸದಸ್ಯನಾಗಿ 29 ವರ್ಷಗಳು ತುಂಬಿದೆ. ಸದನದ ಸದಸ್ಯನಾಗಿ 30ನೇ ವರ್ಷಕ್ಕೆ ಕಾಲಿಡುತ್ತಿದ್ದೇನೆ. ಕಳೆದ 30 ವರ್ಷಗಳಿಂದ ನಮ್ಮೆಲ್ಲರ ಪುಣ್ಯ ಎಷ್ಟು ಚೆನ್ನಾಗಿತ್ತು ಎಂದರೆ, ನಮ್ಮ ಸದನದ ಗೌರವಾನ್ವಿತ ಸಿಟ್ಟಿಂಗ್ ಮೆಂಬರ್‌ಗಳಾರೂ ನಮ್ಮನ್ನು ಅಗಲಿರಲಿಲ್ಲ. ವಯಸ್ಸಾದ ಮೇಲೆ ಕಾಯಿಲೆಯಿಂದ ಅಗಲಿದ್ದರು, ನಿವೃತ್ತರಾದವರು ನಮ್ಮನ್ನು ಅಗಲಿದ್ದರು. ಮೊದಲ ಬಾರಿಗೆ ಹಾಲಿ ಸದಸ್ಯರೊಬ್ಬರು ನಮ್ಮನ್ನು ಅಗಲಿದ್ದಾರೆ. ಇದರಿಂದಾಗಿ ಮನಸ್ಸಿಗೆ ತುಂಬಾ ಮುಜುಗರವಾಗುತ್ತದೆ, ದುಃಖವಾಗುತ್ತದೆ, ಭಾವನೆಗಳನ್ನು ವ್ಯಕ್ತಪಡಿಸಲು ಕಷ್ಟವಾಗುತ್ತದೆ. ಆ ತರಹ ನಮ್ಮನ್ನು ಅಗಲಿರುವವರು ಯಾರೆಂದರೆ, ಈ ಸದನದಲ್ಲಿ ಮೂರು ಬಾರಿ ಸದಸ್ಯರಾಗಿ, ಉಪಸಭಾಪತಿಯಾಗಿ ಕೆಲಸ ಮಾಡಿದ್ದ ಮತ್ತು ನನಗಂತೂ ವೈಯಕ್ತಿಕವಾಗಿ ಅವರ ಜೊತೆಯಲ್ಲಿ ಬಹಳ ವರ್ಷಗಳ ಕಾಲ ಕೆಲಸ ಮಾಡಿದ ಅನುಭವವಿದೆ. ಪಕ್ಷ ಕಟ್ಟುವುದಕ್ಕಾಗಿ ನಾವಿಬ್ಬರೂ ಏನೂ ಅನುಕೂಲತೆಗಳಿಲ್ಲದ ಕಾಲದಲ್ಲಿ ಈಗ ಪ್ರಚಲಿತದಲ್ಲಿಲ್ಲದ ಕೆಂಪು ಬಸ್‌ನಲ್ಲಿ ರಾತ್ರಿಯೆಲ್ಲಾ ಪ್ರಯಾಣ ಮಾಡಿದ, 20–30 ವರ್ಷಗಳ ಹಿಂದೆ ಇಡೀ ರಾಜ್ಯವೆಲ್ಲಾ ಓಡಾಡಿದ, ಕೆಲಸ ಮಾಡಿದ ಒಬ್ಬ ಹೆಣ್ಣುಮಗಳ ನೆನಪಾಗುತ್ತದೆ. ಈ ರೀತಿ ಓಡಾಡಿದ, ಕೆಲಸ ಮಾಡಿರುವ ನೆನಪು ಮನಸ್ಸಿಗೆ ಸ್ವಾಭಾವಿಕವಾಗಿ ಬರುತ್ತದೆ. ಮನಸ್ಸಿಗೆ ದುಃಖವಾಗುತ್ತದೆ, ಭಾರವಾಗುತ್ತದೆ.

ವಿಧಾನ ಪರಿಷತ್ತಿನ ಮಾನ್ಯ ಉಪಸಭಾಪತಿಯವರಾಗಿದ್ದ ಹಾಗೂ ಹಾಲಿ ಸದಸ್ಯರಾಗಿದ್ದ ಶ್ರೀಮತಿ ವಿಮಲಾಗೌಡ ಅವರ ಜೊತೆಗೆ ಹಿರಿಯ ಸ್ವಾತಂತ್ರ್ಯ ಹೋರಾಟಗಾರರು ಹಾಗೂ ಗಾಂಧಿ ಸ್ಮಾರಕ ನಿಧಿ

ಅಧ್ಯಕ್ಷರಾಗಿದ್ದ ಡಾ: ಹೊ. ಶ್ರೀನಿವಾಸಯ್ಯ ಇವರನ್ನು ಕೂಡ ನಾನು ನೆನಪು ಮಾಡಿಕೊಳ್ಳುತ್ತೇನೆ. ವಿಧಾನಸೌಧ ಮತ್ತು ವಿಕಾಸಸೌಧದ ಮಧ್ಯೆ ಗಾಂಧಿ ಪ್ರತಿಮೆ ಸ್ಥಾಪನೆಯ ಸಂದರ್ಭದಲ್ಲಿ ಅವರು ನನಗೆ ಹೇಳಿದ ಮಾತುಗಳು, ಕೊಟ್ಟಂತಹ ಹಿತವಚನಗಳು, ಹೇಳಿಕೊಟ್ಟ ಮಾರ್ಗಗಳು ಬಹಳ. ವಯಸ್ಸಿನಲ್ಲಿ ಅವರು ನನಗಿಂತ ತುಂಬಾ ದೊಡ್ಡವರು. ಡಾ: ಹೊ. ಶ್ರೀನಿವಾಸಯ್ಯರವರು ಇಲ್ಲ ಎಂದರೆ ಮನಸ್ಸಿಗೆ ಬಹಳ ನೋವಾಗುತ್ತದೆ. ಹಾಗೆಯೆ ಖ್ಯಾತ ಹಿರಿಯ ಸಂಸ್ಕೃತ ವಿದ್ವಾಂಸರಾದ ಪ್ರೊ. ಕೆ.ಟಿ. ಪಾಂಡುರಂಗಿರವರು, ಹಿರಿಯ ಪತ್ರಕರ್ತರಾಗಿದ್ದ ಶ್ರೀ ಗರುಡನಗಿರಿ ನಾಗರಾಜರವರು ಹಾಗೂ ಶ್ರೀಮತಿ ಪಾರ್ವತಮ್ಮ ರಾಜ್‌ಕುಮಾರ್ ಅವರುಗಳು ನಿಧನರಾದುದನ್ನು ಈ ಸದನಕ್ಕೆ ತಿಳಿಸಲು ವಿಷಾದಿಸುತ್ತೇನೆ. ಸಂತಾಪ ಸೂಚನಾ ನಿರ್ಣಯವನ್ನು ಸದನದಲ್ಲಿ ಓದುತ್ತೇನೆ.

(ಪ್ರತಿಯನ್ನು ಲಗತ್ತಿಸಿದೆ)

**ಡಾ:ಜಿ.ಪರಮೇಶ್ವರ್(ಸಭಾನಾಯಕರು):–** ಮಾನ್ಯ ಸಭಾಪತಿಯವರೆ, ತಮ್ಮ ಕಾರ್ಯಕಲಾಪದ ಪಟ್ಟಿಯಲ್ಲಿ ಈ ಸಂತಾಪ ಸೂಚನೆ ಬಂದಾಗಲೆಲ್ಲಾ ನಮಗೆ ಬಹಳಷ್ಟು ನೋವಾಗುತ್ತದೆ. ಅದರಲ್ಲೂ ವಿಶೇಷವಾಗಿ ನಮ್ಮ ಜೊತೆಯಲ್ಲಿದ್ದಂಥವರೊಬ್ಬರು ನಮ್ಮನ್ನು ಅಗಲಿ ಹೋಗಿದ್ದಾರೆ ಎಂದು ಹೇಳಿದಾಗ ನಮಗೆಲ್ಲರಿಗೂ ಇನ್ನೂ ಬಹಳ ನೋವಾಗುತ್ತದೆ. ಶ್ರೀಮತಿ ವಿಮಲಾಗೌಡರವರು ನಮ್ಮ ಮಾನ್ಯ ಸದಸ್ಯರಾದ ಪುಟ್ಟಸ್ವಾಮಿಯವರು ಕುಳಿತುಕೊಳ್ಳುವ ಜಾಗದಲ್ಲಿ ಕುಳಿತುಕೊಳ್ಳುತ್ತಿದ್ದರು. ನಾನು ನೋಡಿದಂತೆ ಮಹಿಳಾ ಶಾಸಕರ ಸಾಲಿನಲ್ಲಿ ಅವರು ಯಾವುದಾದರೂ ಪ್ರಮುಖವಾದ ವಿಚಾರಗಳನ್ನು ತೆಗೆದುಕೊಂಡರೆ ಪ್ರಾಮಾಣಿಕ ಪ್ರಯತ್ನ ಮಾಡತಕ್ಕಂಥ ಒಬ್ಬ ಸಹೋದರಿ. ಅವರು ವಿಶೇಷವಾಗಿ ಮಹಿಳೆಯರ ಸಮಸ್ಯೆಗಳ ಬಗ್ಗೆ ಮಾತನಾಡುತ್ತಿದ್ದರು. ಇತ್ತೀಚಿನ ದಿನಗಳಲ್ಲಿ ಮಹಿಳೆಯರ ಮೇಲೆ ಆಗತಕ್ಕಂಥ ದೌರ್ಜನ್ಯಗಳು, ಮಹಿಳೆಯರಿಗೆ ಬರತಕ್ಕಂಥ ಅನೇಕ ಸಮಸ್ಯೆಗಳ ಬಗ್ಗೆ ಅವರು ಎಷ್ಟು ಪರಿಣಾಮಕಾರಿಯಾಗಿ ಸದನದಲ್ಲಿ ಪ್ರಸ್ತಾಪ ಮಾಡುತ್ತಿದ್ದರು ಎಂದರೆ ನಾನು ಗೃಹ ಸಚಿವನಾದ ಮೇಲೆ ಬಹಳಷ್ಟು ಸಂದರ್ಭದಲ್ಲಿ ಪರಮೇಶ್ವರ್‌ರವರೆ, ನೀವು ಗೃಹ ಸಚಿವರಾಗಿರುವಾಗ ಇಂಥದ್ದೆಲ್ಲಾ ಆಗಬಾರದು, ಇಂಥದ್ದೆಲ್ಲಾ ಆಗದ ಹಾಗೆ ನೀವು ನೋಡಿಕೊಳ್ಳಬೇಕೆಂದು ಅವರು ಏರಿದ ಧ್ವನಿಯಲ್ಲಿ ಹೇಳುತ್ತಿದ್ದರು. ಇವತ್ತು ನಿಜಕ್ಕೂ ಕೂಡ ಆ ಸಹೋದರಿಯನ್ನು ನಾವೇನು ಕಳೆದುಕೊಂಡಿದ್ದೇವೆ ನನಗೆ ವೈಯಕ್ತಿಕವಾಗಿ ಬಹಳಷ್ಟು ನೋವಾಗುತ್ತಿದೆ. ಅವರು ತೀರಿಕೊಂಡಾಗ ಅವರ ಪಾರ್ಥೀವ ಶರೀರವನ್ನು ನೋಡುವುದಕ್ಕೆ ನಾನು ಹೋಗಿದ್ದೆ. ಅವರನ್ನು ನೋಡಿದಾಗ ಅವರು ತೀರಿ ಹೋಗಿದ್ದಾರೆಂದು ನನಗೆ ಅನಿಸಲಿಲ್ಲ. ಅವರು ಮಲಗಿದ್ದಾರೇನೋ ಎನ್ನುವ ಭಾವನೆ ಬರುತ್ತಿತ್ತು. ಅವರು ತೀರಿ ಹೋಗಿದ್ದಾರೆ,

ನಮ್ಮನ್ನು ಅಗಲಿ ಹೋಗಿದ್ದಾರೆ ಎನ್ನುವ ಭಾವನೆಯೇ ಬರಲಿಲ್ಲ. ಇವತ್ತು ನನಗೆ ವೈಯುಕ್ತಿಕವಾಗಿ ಬಹಳಷ್ಟು ನೋವಾಗಿದೆ. ಅವರು ಅನೇಕ ಕ್ಷೇತ್ರಗಳಲ್ಲಿ ಕೆಲಸ ಮಾಡಿದ್ದಾರೆ. ಸಹಕಾರಿ, ಕೈಗಾರಿಕೋದ್ಯಮದಲ್ಲಿ ಕೆಲಸ ಮಾಡಿದ್ದಾರೆ. ಆದರೆ ಅವರಿಗೆ ಬಹಳ ಪ್ರಿಯವಾಗಿರುವಂಥದ್ದು ಮಹಿಳೆಯರ ಸಮಸ್ಯೆಗಳಿಗೆ ಸ್ಪಂದಿಸತಕ್ಕಂಥದ್ದು, ಎಲ್ಲಾ ಕ್ಷೇತ್ರಗಳಲ್ಲಿ ಅವರು ಮಾತನಾಡತಕ್ಕಂಥದ್ದನ್ನು ನಾವು ಕೇಳಿದ್ದೆವು. ಹಾಗಾಗಿ ಒಬ್ಬ ಸಜ್ಜನಿಕೆಯ, ಸರಳ ಸಹೋದರಿಯನ್ನು ನಾವು ಕಳೆದುಕೊಂಡಿದ್ದೇವೆ ಎಂದು ಹೇಳಿ ನಾನು ಈ ಸಂದರ್ಭದಲ್ಲಿ ಬಹಳ ನೋವಿನಿಂದ ಅವರಿಗೆ ಸಂತಾಪವನ್ನು ಸೂಚಿಸುವುದಕ್ಕೆ ಬಯಸುತ್ತೇನೆ.

ಡಾ:ಹೊ.ಶ್ರೀನಿವಾಸಯ್ಯನವರು ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್‌ನಲ್ಲಿ ನಾನು ಜನರಲ್ ಮ್ಯಾನೇಜರ್ ಆಗಿದ್ದೆ ಎಂದು ಅವರು ಹೇಳಿಕೊಂಡರಷ್ಟೇ ನಮಗೆ ಗೊತ್ತಾಗುತ್ತದೆ. ಅವರನ್ನು ನೋಡಿದರೆ ಯಾರು ಕೂಡ ಅವರು ವಿದ್ಯಾವಂತರು ಎಂದು ಅಂದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ ಅವರು ಅಷ್ಟು ಸರಳವಾದಂತಹ ವ್ಯಕ್ತಿ. ಗಾಂಧೀಜಿಯ ತತ್ವವನ್ನು ಚಾಚೂ ತಪ್ಪದೆ ಪಾಲಿಸಿದಂತಹ ಒಬ್ಬ ಸ್ವಾತಂತ್ರ್ಯ ಹೋರಾಟಗಾರರು ಯಾರಾದರೂ ಇದ್ದರೆ ಅವರು ಮಾನ್ಯ ಶ್ರೀನಿವಾಸಯ್ಯನವರು. ನಾನು ಅನೇಕ ಸಂದರ್ಭಗಳಲ್ಲಿ ಅವರ ಜೊತೆಯಲ್ಲಿ ಕಾರ್ಯಕ್ರಮಗಳಿಗೆ ಹೋಗಿದ್ದೇನೆ, ಭೇಟಿಯಾಗಿದ್ದೇನೆ. ಅವರು ಎಲ್ಲೂ ಕೂಡ ಗಾಂಧೀಜಿಯ ತತ್ವವನ್ನು ಒಂದಿಷ್ಟು ಕೂಡ compromise ಮಾಡಿಕೊಂಡವರಲ್ಲ. 20,000 ಹಳ್ಳಿಗಳಿಗೆ ಭೇಟಿ ಕೊಟ್ಟು ಗಾಂಧೀಜಿಯ ತತ್ವವನ್ನು ಜನರಿಗೆ ಮುಟ್ಟಿಸುವಂತಹ ಪ್ರಯತ್ನ ಮಾಡುತ್ತಾರೆಂದರೆ ಗಾಂಧೀಜಿಯನ್ನು ಕಳೆದುಕೊಂಡಷ್ಟೇ ನಮಗೆ ನೋವಾಗುತ್ತದೆಂದು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಬಯಸುತ್ತೇನೆ. ಅವರು ವಿಶೇಷವಾಗಿ ಶಾಲಾ-ಕಾಲೇಜುಗಳಿಗೆ ಹೋಗುತ್ತಿದ್ದರು. ಏಕೆಂದರೆ ಮುಂದಿನ ಯುವ ಪೀಳಿಗೆಗೆ ಗಾಂಧೀಜಿಯವರು ಗೊತ್ತಿದೆಯೇ ಎಂದು ಕೇಳಿದರೆ ಬಹುಶಃ ಹೇಳಬಹುದೇನೋ, ಅದು ನನಗೆ ಗೊತ್ತಿಲ್ಲ. ನನಗೆ ಯಾರೋ ಒಂದು ಕಥೆ ಹೇಳುತ್ತಿದ್ದರು. ಅದರಲ್ಲಿ ಮಹಾತ್ಮ ಗಾಂಧೀಜಿಯವರು ಯಾರು ಎಂದು ಕೇಳಿದರೆ "the same person who is standing with the stick on that road" ಎಂದು ಕಾನ್ವೆಂಟ್‌ನಲ್ಲಿ ಮಕ್ಕಳು ಮಾತನಾಡುತ್ತಾರೆ. ಅಂದರೆ, ಮುಂದಿನ ದಿವಸದಲ್ಲಿ ಗಾಂಧೀಜಿಯವರನ್ನು ಮರೆತು ಹೋಗಿಬಿಡುತ್ತಾರೇನೋ, ಅದಾಗಬಾರದು ಎಂದು ನಮ್ಮ ಶ್ರೀನಿವಾಸಯ್ಯನವರು ಶಾಲಾ-ಕಾಲೇಜುಗಳಿಗೆ ಹೋಗಿ ಗಾಂಧೀಜಿಯವರನ್ನು ಪರಿಚಯ ಮಾಡಿಕೊಡುವ ಬಹಳ ಶ್ರೇಷ್ಠವಾದ ಕೆಲಸವನ್ನು ಮಾಡುತ್ತಿದ್ದರು. ಅವರು ಅನೇಕ ಸಂಸ್ಥೆಗಳಲ್ಲಿ ಕೆಲಸ ಮಾಡಿದ್ದಾರೆ,

ಸೇವೆ ಮಾಡಿದ್ದಾರೆ. ಹಾಗಾಗಿ ಅವರಿಗೆ ಕರ್ನಾಟಕ ಸರ್ಕಾರ ಪತಂಜಲಿ ಸುವರ್ಣ ಪದಕ, ರಾಜ್ಯೋತ್ಸವ ಪ್ರಶಸ್ತಿ, ದೆಹಲಿಯ ಪ್ರಕೃತಿ ಚಿಕಿತ್ಸಾ ಕೇಂದ್ರದಿಂದ ಗೌರವ ಡಾಕ್ಟರೇಟ್‌ನ್ನು ಕೊಟ್ಟಿದ್ದಾರೆ. ಅವರ ಆತ್ಮಕ್ಕೆ ಶಾಂತಿಯನ್ನು ಕೊಡಲಿ ಎಂದು ನಾನು ಬಯಸುತ್ತೇನೆ.

ಪ್ರೊ:ಕೆ.ಟಿ.ಪಾಂಡುರಂಗಿಯವರಿಗೆ ಸಂಬಂಧಿಸಿದಂತೆ ಹೇಳುವುದಾದರೆ, ಸಂಸ್ಕೃತ ಎಂದ ತಕ್ಷಣ ನಾವು ಏನೋ ಕಲ್ಪನೆ ಮಾಡಿಕೊಂಡುಬಿಡುತ್ತೇವೆ.

(540) 05.06.2017/ 12.10/ ಕೆಹೆಚ್/ಬಿಎನ್‌ಎಸ್

**ಡಾ॥ ಜಿ.ಪರಮೇಶ್ವರ್ (ಮುಂದು):-** ಬಹುಶಃ ಈ ದೇಶದಲ್ಲಿ ಎಲ್ಲೋ ಒಂದು ಕಡೆ ಸಂಸ್ಕೃತ ಭಾಷೆಯನ್ನು ದೈವ ಭಾಷೆ ಎಂದು ಹೇಳಿ ದೇವರ ಲೆಕ್ಕದಲ್ಲಿ ಇಟ್ಟಿದ್ದಾರೆ. ಇವತ್ತಿನವರೆಗೂ ಕೂಡ ಸಾಮಾನ್ಯ ಜನರಿಗೆ ಸಂಸ್ಕೃತ ಭಾಷೆ ಎನ್ನುವುದು ಗೊತ್ತಿಲ್ಲ. ಆದರೆ ಇವತ್ತಿನ ದಿವಸ ಶಾಲಾ-ಕಾಲೇಜುಗಳಲ್ಲಿ ಸಂಸ್ಕೃತ ಭಾಷೆಯನ್ನು ಕಲಿಯುವುದಕ್ಕೆ ಅವಕಾಶವಿದೆ. ಹಿಂದೆ ಒಂದು ಕಾಲವಿತ್ತು. ಈಶ್ವರಪ್ಪನವರೆ, ಸಂಸ್ಕೃತವನ್ನು ಕೇಳಿದರೆ ಕೇಳಿದವರ ಕಿವಿಗೆ ಸೀಸಾವನ್ನು ಉಯ್ಯುವಂತಹ ಒಂದು ಕಾಲವಿತ್ತು. ಆದರೆ ಅದೆಲ್ಲವನ್ನು ಮೀರಿ ಪ್ರೊ॥ ಕೆ.ಟಿ.ಪಾಂಡುರಂಗಿಯವರು 20 ವರ್ಷಗಳ ಕಾಲ ಸಂಸ್ಕೃತ ಇಲಾಖೆಯಲ್ಲಿ ಮುಖ್ಯಸ್ಥರಾಗಿ ಕೆಲಸ ಮಾಡಿ, ಬಹಳಷ್ಟು ಜನರಿಗೆ ಸಂಸ್ಕೃತವನ್ನು ಕಲಿಸುವಂತಹ ಶ್ರೇಷ್ಠವಾದ ಕೆಲಸವನ್ನು ಮಾಡಿದ್ದಾರೆ. ಇವರಿಗೆ ರಾಷ್ಟ್ರ ಪ್ರಶಸ್ತಿ ಮತ್ತು ರಾಜ್ಯ ಪ್ರಶಸ್ತಿ ಕೂಡ ಸಿಕ್ಕಿದೆ. ಇವರ ನಿಧನದಿಂದಾಗಿ ನಮ್ಮ ರಾಜ್ಯವು ಒಬ್ಬ ಸಂಸ್ಕೃತ ವಿದ್ವಾಂಸರನ್ನು ಕಳೆದುಕೊಂಡಿದೆಯೆಂದು ಮತ್ತು ಅವರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

**ಶ್ರೀ ಗರುಡನಗಿರಿ ನಾಗರಾಜುರವರು** ಬಹುಶಃ Journalism ನಲ್ಲಿ ಪತ್ರಕರ್ತರ ಸಾಲಿನಲ್ಲಿ ಅತ್ಯಂತ ಮಾದರಿಯಾಗಿರುವಂತಹವರು. ಇವತ್ತು ನಮ್ಮ ಸ್ನೇಹಿತರೆಲ್ಲ Journalism ನವರು ಆ ಭಾಗದಲ್ಲಿ ಕುಳಿತಿದ್ದಾರೆ. ಅವರಿಗೆ ಎಂತಹ ಕಲ್ಪನೆಯಿತ್ತೆಂದರೆ ಯಾವುದಾದರೂ ಒಬ್ಬ ಪತ್ರಕರ್ತನಾದವನು ಸಮಾಜದ ನೈಜಸ್ಥಿತಿಯನ್ನು ಅರ್ಥ ಮಾಡಿಕೊಳ್ಳಬೇಕು. ನಿಜವಾಗಿಯೂ ಸಮಾಜದಲ್ಲಿ ಏನಾಗುತ್ತದೆಂಬುದನ್ನು ನಾನು ಪ್ರತಿಬಿಂಬಿಸಬೇಕು. ಅದನ್ನು ಅರ್ಥ ಮಾಡಿಕೊಂಡರೆ ಮಾತ್ರ ನಾನು ಆ ಸಮಾಜದ ನ್ಯೂನತೆಗಳನ್ನು ಮತ್ತು ಸಮಾಜದ ಪ್ರತಿಬಿಂಬವನ್ನು ನಾವು ಜನರ ಮುಂದೆ ಹೇಳುವುದಕ್ಕೆ ಸಾಧ್ಯವಾಗುತ್ತದೆ. ಇತ್ತೀಚೆಗೆ ಅನೇಕ ಜನ ಯುವಕರು ಪತ್ರಿಕೋದ್ಯಮ ಕ್ಷೇತ್ರಕ್ಕೆ ಬಂದಿದ್ದಾರೆ. ಅವರಿಗೆ ಎಲ್ಲೋ ಒಂದು ಕಡೆ ಗ್ರಾಮೀಣ ಬದುಕಿನಿಂದ ಅಥವಾ ದೇಶದ, ಸಮಾಜದ ವಿವಿಧ ಪದರಗಳನ್ನು

ಅರ್ಥ ಮಾಡಿಕೊಳ್ಳುವುದಕ್ಕೆ ಬಹಳ ಸಮಯಾವಕಾಶ ಬೇಕಾಗುತ್ತದೆ. ಶ್ರೀ ಗರುಡನಗಿರಿ ನಾಗರಾಜ ರವರು ಆ ದೃಷ್ಟಿಯಲ್ಲಿ ಬಹಳ ಮಾದರಿಯಾಗಿದ್ದಾರೆ. ಅವರು 20 ಸಾವಿರಕ್ಕೂ ಹೆಚ್ಚು ಗ್ರಾಮಗಳಿಗೆ ಭೇಟಿ ಕೊಟ್ಟಿದ್ದಾರೆ. ಅದಕ್ಕೆ ಸಂಬಂಧಪಟ್ಟಂತೆ ಒಂದೆರಡು ಪುಸ್ತಕಗಳನ್ನು ಬರೆದಿದ್ದಾರೆ. ಆ ಪುಸ್ತಕಗಳನ್ನು ನಾನು ಸಹ ಓದಿದ್ದೇನೆ. ಆದರೆ ಈ ಸಮಾಜವನ್ನು ಅರ್ಥ ಮಾಡಿಕೊಳ್ಳುವುದಕ್ಕೆ 20 ಸಾವಿರ ಗ್ರಾಮಗಳಿಗೆ ಏಕೆ ಭೇಟಿ ಕೊಡಬೇಕು. ಏಕೆಂದರೆ ಗ್ರಾಮೀಣ ಬದುಕು ಭಾರತೀಯ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತದೆ. ಅದನ್ನು ಇಡೀ ಸಮಾಜಕ್ಕೆ ಮತ್ತು ಯುವ ಪೀಳಿಗೆಗೆ ಹೇಳಬೇಕೆನ್ನುವ ದೃಷ್ಟಿಯಿಂದ ಅವರು ಗ್ರಾಮಗಳಿಗೆ ಭೇಟಿ ಕೊಡುತ್ತಿದ್ದರು ಎನ್ನುವುದು ನನ್ನ ಭಾವನೆ. ಅವರಿಗೆ ರಾಜ್ಯ ಸರ್ಕಾರವು ರಾಜ್ಯೋತ್ಸವ ಪ್ರಶಸ್ತಿಯನ್ನು ಕೊಟ್ಟಿದೆ. ಅವರ ನಿಧನದಿಂದಾಗಿ ಒಬ್ಬ ಹಿರಿಯ ಪತ್ರಕರ್ತರನ್ನು ನಾವು ಕಳೆದುಕೊಂಡಂತಾಗಿದೆ. ಅವರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಹೇಳುವುದಕ್ಕೆ ಬಯಸುತ್ತೇನೆ.

**ಶ್ರೀಮತಿ ಪಾರ್ವತಮ್ಮ ರಾಜ್‌ಕುಮಾರ್** ಬಹುಶಃ ನಮ್ಮ ಹೆಸರಾಂತ ಚಿತ್ರನಟ ಡಾ॥ ರಾಜ್‌ಕುಮಾರ್‌ರವರು ಅಷ್ಟು ಎತ್ತರಕ್ಕೆ ಬೆಳೆಯುವುದಕ್ಕೆ ಯಾವುದಾದರೂ ಒಂದು ಶಕ್ತಿ ಅವರ ಹಿಂದೆ ಇದೆ ಎಂದರೆ ಅದು ಶ್ರೀಮತಿ ಪಾರ್ವತಮ್ಮ ರಾಜ್‌ಕುಮಾರ್. ನೆನ್ನೆಯ ದಿವಸ ನನಗೆ ಯಾರೋ ಹೇಳುತ್ತಿದ್ದರು. ಅವರು ಎಸ್.ಎಸ್.ಎಲ್.ಸಿ. ಓದಿರುವುದು. ಎಸ್.ಎಸ್.ಎಲ್.ಸಿ. ಓದಿರುವಂತಹ ಒಬ್ಬ ಹೆಣ್ಣುಮಗಳು ಇಷ್ಟೊಂದು ಶಕ್ತಿಯುತವಾಗಿ ಡಾ॥ ರಾಜ್‌ಕುಮಾರ್‌ರಂತಹವರನ್ನು ಇಡೀ ದೇಶಕ್ಕೆ ಪರಿಚಯ ಮಾಡಿಕೊಟ್ಟರು. ಬಹುಶಃ ಡಾ॥ ರಾಜ್‌ಕುಮಾರ್‌ರವರನ್ನು ವೀರಪ್ಪನ್ ಕರೆದುಕೊಂಡು ಹೋದಾಗ ಆ ಸಂದರ್ಭದಲ್ಲಿ ನಾನು ಕೂಡ ಸಚಿವನಾಗಿದ್ದೆ. ಕೆಲವು ವಿಷಯಗಳಲ್ಲಿ ನಾವೆಲ್ಲ ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಚರ್ಚೆ ಮಾಡುತ್ತಿರುತ್ತೇವೆ. ವೀರಪ್ಪನ್ ಕಳುಹಿಸಿರುವ cassettes ರಾತ್ರಿ 2 ಗಂಟೆಯಲ್ಲಿ ಬರುತ್ತಿತ್ತು. ನಾವೆಲ್ಲ ಕೆಲವರು ಕುಳಿತುಕೊಂಡು ಅದೆನ್ನೆಲ್ಲ ಕೇಳಿಕೊಂಡು ಅಚ್ಚ ತಮಿಳಿನಲ್ಲಿ ಬರುವಂತಹದನ್ನು translate ಮಾಡಿ ಅವರ ಕುಟುಂಬಕ್ಕೆ ತಿಳಿಸುವಂತಹ ಕೆಲಸವನ್ನು ಮಾಡುತ್ತಿದ್ದೆವು. ನಾನು ಅನೇಕ ಸಂದರ್ಭದಲ್ಲಿ ಆ team ನಲ್ಲಿ ಕೆಲಸ ಮಾಡಿದ್ದೇನೆ. ಡಾ॥ ರಾಜ್‌ಕುಮಾರ್ ರವರ ಬಗ್ಗೆ ಅವರಿಗೆ ಎಂತಹ confidence ಇತ್ತೆಂದರೆ ಅವರು ಬಂದೆ ಬರುತ್ತಾರೆ ಎಂದು ಹೇಳುತ್ತಿದ್ದರು. ಪರಮೇಶ್ವರ್‌ರವರೇ ಡಾ॥ ರಾಜ್‌ಕುಮಾರ್‌ರವರು ವಾಪಸ್ಸು ಬಂದೆ ಬರುತ್ತಾರೆ. ವೀರಪ್ಪನ್ ಡಾ॥ ರಾಜ್‌ಕುಮಾರ್‌ರವರಿಗೆ ಏನು ಮಾಡುವುದಕ್ಕಾಗುವುದಿಲ್ಲ ಎಂದು ಹೇಳುವಂತಹ ಮನಃಸ್ಥಿತಿ, ಧೈರ್ಯ ಅದು ಪಾರ್ವತಮ್ಮನವರಿಗೆ ಮಾತ್ರ ಬರುವುದಕ್ಕೆ ಸಾಧ್ಯ. ಡಾ॥ ರಾಜ್‌ಕುಮಾರ್‌ರವರು ವಾಪಸ್ಸು ಬಂದಾಗ, ನಾನು ಪಾರ್ವತಮ್ಮನವರ ಹತ್ತಿರ ಹೋದಾಗ ಒಂದೆರಡು

ವರ್ಷ ನಾನು Information Minister ಆಗಿದ್ದೆ. ಆಗ ನಾವು ತುಮಕೂರಿನಲ್ಲಿ Information Department ನಿಂದ ಪ್ರಶಸ್ತಿ ಸಮಾರಂಭವೆಂಬ ಒಂದು ದೊಡ್ಡ ಕಾರ್ಯಕ್ರಮವನ್ನು ಮಾಡಿದ್ದೆವು. ನಾನು ಈ ಕಾರ್ಯಕ್ರಮಕ್ಕೆ ಡಾ॥ ರಾಜ್‌ಕುಮಾರ್‌ರವರನ್ನು ಕರೆದುಕೊಂಡು ಬರುತ್ತೇನೆಂದು ಒಂದು ಲಕ್ಷ ಜನರನ್ನು ಸೇರಿಸಿದ್ದೆ. ಡಾ॥ ರಾಜ್‌ಕುಮಾರ್‌ರವರು ಕಾಡಿನಿಂದ ಬಂದು ಕೇವಲ 10 ದಿವಸಗಳು ಕಳೆದಿವೆ. ನಾನು ತುಮಕೂರಿನಲ್ಲಿ ಡಾ॥ ರಾಜ್‌ಕುಮಾರ್‌ರವರು ಬರುತ್ತಾರೆಂದು announce ಮಾಡಿದೆ. ಡಾ॥ ರಾಜ್‌ಕುಮಾರ್‌ರವರು ಹೇಗೆ ಬರುತ್ತಾರೆ. ಇನ್ನು ಕೂಡ ಅವರು ಮಾನಸಿಕವಾಗಿ ಸಹಜ ಸ್ಥಿತಿಗೆ ಬಂದಿರಲಿಲ್ಲ. ತಾವು ಕಾರ್ಯಕ್ರಮಕ್ಕೆ ಬರಬೇಕೆಂದು ನಾನು ಡಾ॥ ರಾಜ್‌ಕುಮಾರ್‌ರವರನ್ನು ಹೋಗಿ ಕೇಳಿದೆ. ಅವರು ಪಾರ್ವತಮ್ಮನವರ ಕಡೆ ನೋಡಿದರು. ಒಂದೇ ಬಾರಿಗೆ ಪಾರ್ವತಮ್ಮನವರು ನಾನು ಡಾ॥ ರಾಜ್‌ಕುಮಾರ್‌ರವರನ್ನು ಕರೆದುಕೊಂಡು ಬರುತ್ತೇನೆ. ಎಷ್ಟು ಧೈರ್ಯವಾಗಿ ಅವರು ಡಾ॥ ರಾಜ್‌ಕುಮಾರ್‌ರವರನ್ನು ಹೊರಗಡೆ ಕರೆದುಕೊಂಡು ಬಂದು, ಹಿಂದೆ ನಡೆದಿದ್ದೆಲ್ಲ ಮರೆತು ಸಮಾಜದಲ್ಲಿ ನಮಗೆ ಏನು ತೊಂದರೆಯಾಗಿಲ್ಲವೆಂದು ತೋರಿಸುವಂತಹದ್ದನ್ನು ಮಾಡಿದರಲ್ಲವೆ ಅದನ್ನು ಪಾರ್ವತಮ್ಮನವರಿಗೆ ಮಾತ್ರ ಮಾಡುವುದಕ್ಕೆ ಸಾಧ್ಯ. ಹಾಗಾಗಿ ಒಬ್ಬ ಸಹೋದರಿ ಅದರಲ್ಲೂ ವಿಶೇಷವಾಗಿ ಯುವಕರನ್ನು, ಯುವ ನಟ, ನಟಿಯರಿಗೆಲ್ಲ ಉತ್ತೇಜನ ಕೊಡುವಂತಹದ್ದು. ಅವರಿಗೆ ಪ್ರಾರಂಭದಲ್ಲಿಯೇ discourage ಮಾಡಿಬಿಟ್ಟರೆ ಮನೆಗೆ ಹೋಗಿಬಿಡುತ್ತಾರೆ. ಅವರಿಗೆ ಧೈರ್ಯ ಕೊಟ್ಟು ನೀವು ಬಹಳ ಚೆನ್ನಾಗಿದ್ದೀರಿ. ನೀವು ಬಹಳ ಸುಂದರವಾಗಿದ್ದೀರಿ. ಸುಂದರವಾಗಿಲ್ಲದಿದ್ದರೂ ನೀವು ಸುಂದರವಾಗಿದ್ದೀರಿ ಎಂದು ಹೇಳುವುದು. Acting ಬರದೇ ಇದ್ದರೂ ನೀವು ಬಹಳ ಚೆನ್ನಾಗಿ acting ಮಾಡುತ್ತೀರಿ ಎಂದು ಹೇಳುವುದು. ಇಂತಹ ಉತ್ತೇಜನಕಾರಿಯಾದ ಮಾತುಗಳನ್ನಾಡಿ, ಅನೇಕ ಜನರನ್ನು ರಾಜ್ಯಕ್ಕೆ, ಆ ಕಲಾ ಕ್ಷೇತ್ರಕ್ಕೆ ಕೊಡುವಂತಹ ಕೆಲಸವನ್ನು ಪಾರ್ವತಮ್ಮನವರು ಮಾಡಿದ್ದರು. ಅವರಿಗೆ ಬೆಂಗಳೂರು ವಿಶ್ವವಿದ್ಯಾನಿಲಯ ಗೌರವ 'Doctorate' ಅನ್ನು ಕೊಟ್ಟಿರುವಂತಹದ್ದನ್ನು ಇವತ್ತಿನ ದಿವಸ ನೆನಪಿಸಿಕೊಳ್ಳಬೇಕಾಗುತ್ತದೆ. ಪಾರ್ವತಮ್ಮನವರು ಇವತ್ತು ನಮ್ಮನ್ನೆಲ್ಲ ಅಗಲಿ ಹೋಗಿದ್ದಾರೆ. ಮಾನ್ಯ ಸಭಾಪತಿಯವರೇ ಇವರೆಲ್ಲ ಮಹನೀಯರಿಗೆ ಬಹಳ ಅತ್ಯಂತ ನೋವಿನಿಂದ ನಾನು ಅವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತೇನೆ. ಅವರ ಕುಟುಂಬಗಳಿಗೆ ಭಗವಂತನು ನಷ್ಟವನ್ನು ಭರಿಸುವಂತಹ ಶಕ್ತಿಯನ್ನು ಕೊಡಲಿ ಎಂದು ಪ್ರಾರ್ಥನೆಯನ್ನು ಸಲ್ಲಿಸಿ, ಅವಕಾಶಕ್ಕಾಗಿ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ (ವಿರೋಧಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೆ, ನಾನು ವಿಧಾನ ಪರಿಷತ್ತಿಗೆ ಬರುತ್ತೇನೆಂದು ಅಂದುಕೊಂಡಿರಲಿಲ್ಲ. ನಾನು ಬಂದಾಗ ವಿಮಲಕ್ಕನವರು ಸಾಯುತ್ತಾರೆಂದು ಸಹ ಅಂದುಕೊಂಡಿರಲಿಲ್ಲ. ವಿಮಲಕ್ಕನವರು ಸತ್ತಾಗ ಶ್ರದ್ಧಾಂಜಲಿ ಸಭೆಯಲ್ಲಿ ನಾನು ಮಾತನಾಡುವಂತಹ ಪರಿಸ್ಥಿತಿ ಬರುತ್ತದೆಂಬ ಕಲ್ಪನೆಯನ್ನು ಸಹ ನನ್ನ ಜೀವನದಲ್ಲಿ ನಾನು ಮಾಡಿರಲಿಲ್ಲ. ಇವತ್ತಿನ ದಿವಸ ರಾಜಕಾರಣ ಎಂದರೆ ಸ್ವಾಭಾವಿಕವಾಗಿ ಸ್ಥಾನಮಾನಗಳಿಗಾಗಿ ಪಕ್ಷಗಳಿಗೆ ಬರುತ್ತಾರೆ. ಕೇವಲ ಸ್ಥಾನಮಾನಗಳಿಗೆ ಒಂದು ಪಕ್ಷದಿಂದ ಇನ್ನೊಂದು ಪಕ್ಷಕ್ಕೆ ಪಕ್ಷಾಂತರ ಮಾಡುವುದು. ನನಗೆ ಇನ್ನೂ ನೆನಪಿದೆ. 1989ರಲ್ಲಿ ಕರ್ನಾಟಕ ರಾಜ್ಯದಲ್ಲಿ 4 ಸ್ಥಾನಗಳನ್ನು ಮಾತ್ರ ನಾವು ಭಾರತೀಯ ಜನತಾ ಪಾರ್ಟಿ ಪಕ್ಷದಿಂದ ಗೆದ್ದಿದ್ದೆವು. ಆಗ ಭಾರತೀಯ ಜನತಾ ಪಾರ್ಟಿಯ ಯುವ ಮೋರ್ಚಾದ ರಾಜ್ಯಾಧ್ಯಕ್ಷನಾಗಿದ್ದೆ. ಆ ಸಂದರ್ಭದಲ್ಲಿ ವಿಮಲಕ್ಕನವರು ರಾಜ್ಯದ ಭಾರತೀಯ ಜನತಾ ಪಾರ್ಟಿಯ ಕಾರ್ಯದರ್ಶಿಯಾಗಿದ್ದರು. ನನ್ನ ಹತ್ತಿರ ಮತ್ತು ವಿಮಲಕ್ಕನವರ ಹತ್ತಿರ ಕಾರು ಇರಲಿಲ್ಲ. ರಾಜ್ಯವನ್ನು ಪಕ್ಷದ ಸಂಘಟನೆಗೆ ಸುತ್ತ ಬೇಕಾದರೆ ನಾನು ಕೇಳುತ್ತಿದ್ದೆ. ಮೊದಲನೆಯದಾಗಿ ನೀವು ಹೆಣ್ಣುಮಗಳು. ಈ ರೀತಿ ರಾತ್ರಿಯ ಸಮಯದಲ್ಲಿ ಬಸ್‌ನಲ್ಲಿ ಮನೆಗೆ ಹೊರಡುತ್ತೀರಾ. ಬೆಳಗಿನ ಜಾವ 3.00 ಗಂಟೆ ಅಥವಾ 4.00 ಗಂಟೆಗೆ ಬಸ್ ಬರುತ್ತದೆ. ಆಗ ಏನಾಗುತ್ತದೆಂಬುದು ಗೊತ್ತಾಗುವುದಿಲ್ಲ. ನೀವು ಹೇಗೆ ಬರುತ್ತೀರಾ ಎಂದು ಕೇಳಿದೆ. ನಾನು ಶಿವಮೊಗ್ಗದಿಂದ ಬರುತ್ತಿದ್ದೆ. ಅವರು ಬೆಂಗಳೂರಿನಿಂದ ಬರುತ್ತಿದ್ದರು. ಇಬ್ಬರು ಒಟ್ಟಿಗೆ ಒಂದು ಕಡೆ ಭೇಟಿಯಾಗುತ್ತಿದ್ದೆವು. ಅವರು ಹೇಳಿದ ಮಾತು ಇವತ್ತಿಗೂ ಸಹ ನನಗೆ ನೆನಪಿದೆ. ನಾವು ಮಾಡುವಂತಹ ಕೆಲಸ ದೇಶದ ಕೆಲಸ. ನಾವು ಮಾಡುವಂತಹ ಕೆಲಸ ಸಂಘಟನೆ ಕೆಲಸ. ಈಶ್ವರಪ್ಪನವರೆ, ಯಾವ ಕಾರಣಕ್ಕೂ ನಮಗೆ ತೊಂದರೆಯಾಗುವುದಕ್ಕೆ ಸಾಧ್ಯವಿಲ್ಲ. ಈ ಸಂಘಟನೆ ಕೆಲಸಗಳು ಯಾವತ್ತೂ ನಿಲ್ಲುವುದು ಬೇಡ. ಇದರಲ್ಲಿಯೇ ಮುಂದುವರೆಯಬೇಕೆನ್ನುವಂತಹ ಮಾತನ್ನು ಅವರು ಹೇಳುತ್ತಿದ್ದರು.

541 12-20 5-6-2017 ಬಿಕೆಪಿ/ಬಿಎನ್ ಎಸ್

ಶ್ರೀ ಕೆ.ಎಸ್,ಈಶ್ವರಪ್ಪ :– ಮುಂದು, ಅವರು ಒಂದು ಬಾರಿ ಎಂ.ಎಲ್.ಎ ಚುನಾವಣೆಗೆ ಸ್ಪರ್ಧಿಸಿದ್ದರು. ಪಕ್ಷಗಳಲ್ಲಿ ಪಕ್ಷ ನಿಷ್ಠೆ ಎನ್ನುವುದು ಇಲ್ಲವೆಂದರೆ ಹೇಗೆ ಆಗುತ್ತದೆ ಎನ್ನುವುದರ ಬಗ್ಗೆ ಹೇಳಲಿಕ್ಕೆ ಬಯಸುತ್ತೇನೆ. ಅವರು ಚುನಾವಣೆಯಲ್ಲಿ ಸೋತರು. ಅವರು ಚುನಾವಣೆಯಲ್ಲಿ ಸೋತಿದ್ದಕ್ಕೆ ಬೇಜಾರಾಗಲಿಲ್ಲ. ಸೋತ ಎರಡು ದಿನಕ್ಕೆ ಅವರಿಗೆ ಸಮಾಧಾನ ಮಾಡಲೆಂದು ನಾನು ಅವರ ಮನೆಗೆ ಹೋದೆ. ಆಗ ಅವರು "ನಾನು ಸೋತಿದ್ದಕ್ಕೆ ಬೇಜಾರಿಲ್ಲ, ಪಕ್ಷದಲ್ಲಿರುವಂತಹ ವ್ಯಕ್ತಿಗಳು, ಸಣ್ಣ-ಪುಟ್ಟ ಆಸೆಗಳಿಗೆ ಪಕ್ಷಕ್ಕೆ ದ್ರೋಹ ಮಾಡುವಂತಹ ಸ್ಥಿತಿ ಇನ್ನೂ

ನಮ್ಮ ಪಕ್ಷದಲ್ಲಿದೆ, ಇದಕ್ಕೆ ನಾವು ಸರಿಯಾದ ಉತ್ತರವನ್ನು ಕಂಡು ಹಿಡಿಯಬೇಕೆಂದರು". ಪಕ್ಷ ದ್ರೋಹಿಗಳಿದ್ದಾರೆನ್ನುವ ಅಂಶವನ್ನು ಅವರು ಹೇಳಿದಾಗ ನನಗೆ ಆಶ್ಚರ್ಯವಾಯಿತು. ನಾನು ಇನ್ನು ಆಗತಾನೆ ಬೆಳೆಯುತ್ತಿರುವಂತಹ ಸಂದರ್ಭದಲ್ಲಿ ಪಕ್ಷದ ಅಭ್ಯರ್ಥಿಯನ್ನು ಸೋಲಿಸುವುದಕ್ಕೆ ಪಕ್ಷದ ಕಾರ್ಯಕರ್ತರೆ ಪ್ರಯತ್ನ ಮಾಡುತ್ತಾರೆಂದರೆ ಇನ್ನೂ ಸಂಸ್ಕಾರ ಕೊಡುವುದರಲ್ಲಿ ವಿಫಲರಾಗಿದ್ದೇವೆ ಎಂದು ಹೇಳಬೇಕಾಗುತ್ತದೆ. ನಾವು ನಾಲ್ಕು ಜನ ಶಾಸಕರುಗಳಿದ್ದಂತಹ ಸಂದರ್ಭದ ನಂತರ ಅವರು ಸ್ಪರ್ಧೆ ಮಾಡಿದಂತಹ ಸಮಯದಲ್ಲಿ ಈ ವಿಚಾರವನ್ನು ನಾನು ಗಮನಿಸಿದ್ದೇನೆ. ಇವತ್ತು ಎಲ್ಲಾ ಪಕ್ಷಗಳಲ್ಲೂ ಶ್ರೀಮಂತರುಗಳು, ಪ್ರಭಾವಿಗಳು, ಜಾತಿ ಪ್ರಭಾವಿಗಳು, ದೆಹಲಿಯಿಂದ ಶಿಫಾರಸ್ಸು ಮಾಡಿಕೊಂಡು ಬರುತ್ತಾರೆ. ಇಂತಹ ಒಬ್ಬ ಪ್ರಭಾವಿ ವ್ಯಕ್ತಿಯೊಬ್ಬರು ಬಂದು ಬಿಜೆಪಿ ಸೇರುತ್ತಿದ್ದಾರೆ, ಅವರನ್ನು ತೆಗೆದುಕೊಂಡರೆ ಒಳ್ಳೆಯದಾಗುತ್ತದೆ ಎಂದು ಅನೇಕ ಸ್ನೇಹಿತರು ನನ್ನ ಬಂದು ಕೇಳುತ್ತಾರೆ. ಅವರು "ಪಕ್ಷ ಕಟ್ಟಲಿಕ್ಕೆ ಬರುತ್ತಾರೆಯೇ" ಎಂದು ನಾನು ಬಂದವರಿಗೆ ವಾಪಸ್ಸು ಕೇಳುತ್ತೇನೆ. ಅವರು ಯಾವ ಕಾರಣಕ್ಕೂ ಪಕ್ಷ ಕಟ್ಟಲಿಕ್ಕೆ ಬರುವುದಿಲ್ಲ. ಎಂ.ಎಲ್.ಎ ಆಗಬೇಕು, ಮಂತ್ರಿಯಾಗಬೇಕೆನ್ನುವ ಲೆಕ್ಕದಲ್ಲಿ ಬರುತ್ತಾರೆಯೇ ವಿನ: ಸಂಘಟನೆಯ ಮೂಲಕ ಪಕ್ಷ ಕಟ್ಟಬೇಕೆನ್ನುವ ವ್ಯವಸ್ಥೆ ಇವತ್ತು ಬಹಳ ದೂರ ಹೋಗುತ್ತಿದೆಯಲ್ಲಾ ಎನ್ನುವಂತಹ ನೋವು ನನಗೆ ತುಂಬಾ ಇದೆ.

ಶ್ರೀಮತಿ ವಿಮಲಕ್ಕಾ ಎಂದ ತಕ್ಷಣ ನಮ್ಮಲ್ಲಿ ಎಂ.ಎಲ್.ಸಿ ಆಗಿದ್ದರು, ಸಭಾಪತಿಯಾಗಿದ್ದರು, ಇದ್ಯಾವುದೂ ಅಲ್ಲ. ಅವರ ಜೊತೆಗೆ ನಾವು ಇಡೀ ರಾಜ್ಯದಲ್ಲಿ ಸುತ್ತುತ್ತಿದ್ದಂತಹ ಸಂದರ್ಭದಲ್ಲಿ ಪಕ್ಷದ ಸಂಘಟನೆ, ಪಕ್ಷದ ಸಂಘಟನೆ ಎಂದು ಹೇಳುತ್ತಿದ್ದಂತಹ ಮಾತು ಇನ್ನೂ ಸಹ ನನ್ನ ಕಿವಿಯಲ್ಲಿ ಕೇಳಿ ಬರುತ್ತಿದೆ. ಗೊತ್ತಿಲ್ಲ. ಏಕೆಂದರೆ, ಸ್ವಾಭಾವಿಕವಾಗಿ ಈ ಸಭೆಯಲ್ಲಿ ಸಂತಾಪ ಸೂಚನೆಯ ಬಗ್ಗೆ ಮಾತನಾಡುತ್ತಿರುವಂತಹ ಸಂದರ್ಭದಲ್ಲಿ ಅವರ ಕುಟುಂಬವರ್ಗದವರಿಗೆ ದು:ಖ ಭರಿಸುವಂತಹ ಶಕ್ತಿಯನ್ನು ಕೊಡಲಿ, ಭಗವಂತ ಒಳ್ಳೆಯದನ್ನು ಮಾಡಲಿ ಎನ್ನುವುದು ಮಾಮೂಲಿಯಾಗಿ ಆಡುವಂತಹ ಮಾತಾಗಿದೆ. ಆದರೆ, ನನ್ನಂತಹ ಸಾವಿರಾರು ಕಾರ್ಯಕರ್ತರಿಗೆ ಆಗಿರುವಂತಹ ನೋವನ್ನು ಆ ಭಗವಂತ ಯಾವ ರೀತಿಯಲ್ಲಿ ಹೋಗಿಸುತ್ತಾನೋ ನನಗೆ ಗೊತ್ತಿಲ್ಲ. ಏಕೆಂದರೆ, ರಾಜಕಾರಣದಲ್ಲಿ ಆದರ್ಶ ರಾಜಕಾರಣಿಗಳ್ಯಾರು ಎನ್ನುವುದನ್ನು ಹುಡುಕಿ ತೆಗೆಯಬೇಕು. ತಾವು ಈ ವಿಚಾರವಾಗಿ ಪ್ರಸ್ತಾಪ ಮಾಡುತ್ತಿರುವಂತಹ ಸಂದರ್ಭದಲ್ಲಿ ಹೇಳಿದಿರಿ. ಸಾಕಷ್ಟು ಮಟ್ಟಿಗೆ ಅವರು ಪಕ್ಷದ ಸಂಘಟನೆಯಲ್ಲಿ ತೊಡಗಿದ್ದರು. ಅವರು ಪಕ್ಷದ ಮಹಿಳಾ ಮೋರ್ಚಾ ಅಧ್ಯಕ್ಷೆಯಾಗಿದ್ದರು. ನಾನು ಯಾರೋ ಒಬ್ಬ ಮಹಿಳೆಯರ ಮನೆಗೆ ಅವರನ್ನು ಕರೆದುಕೊಂಡು ಹೋದೆ. ಆಗ ಅವರು ನಮ್ಮ ಮನೆಗೆ ನೀವು ಏತಕ್ಕೆ ಬಂದಿದ್ದೀರಿ ಎಂದು ಕೇಳಿದಾಗ ಇವರು ನಮ್ಮ ಪಕ್ಷಕ್ಕೆ ಸೇರಿಕೊಳ್ಳಿ ಎಂದವರಿಗೆ ಹೇಳಿದರು. ಆಗ ಅವರು

“ನಿಮಗೇನೂ ಉದ್ಯೋಗವಿಲ್ಲವೇ, ಹೆಣ್ಣು ಮಗಳಾಗಿ ನಾನು ಮನೆ ಬಿಟ್ಟು ಹೋಗಲು ಹೇಗೆ ಸಾಧ್ಯ, ಇದು ನನ್ನ ಕೈಯಲ್ಲಿ ಆಗುವುದಿಲ್ಲವೆಂದು ಅವರು ನೇರವಾಗಿ ಮುಖಕ್ಕೆ ಹೊಡೆದಂತೆ ಹೇಳಿದರು. ಆಗ ನನಗೆ ಬಹಳ ನೋವಾಯಿತು. ಆಗ ನನಗೆ ವಿಮಲಕ್ಕಾ ಹೇಳಿದರು. ಇವತ್ತು ಇವರು ಈ ರೀತಿ ಹೇಳುತ್ತಾರೆ, ನಮ್ಮ ಪಕ್ಷ ಬೆಳೆಯುತ್ತಾ ಹೋದಂತೆ, ಹೋದಂತೆ ಹೆಣ್ಣುಮಕ್ಕಳು ನುಗ್ಗಿ ಬರುತ್ತಾರೆ, ಏನೂ ತಲೆ ಕೆಡಿಸಿಕೊಳ್ಳಬೇಡಿ ಎಂದು ಹೇಳಿದರು. ಅವರು ಸತ್ತಾಗ ಆ ಮಾತು ನನಗೆ ನೆನಪಾಯಿತು. ವಿಮಲಕ್ಕನಂತಹವರನ್ನು ನಾವು ಇಂದು ಕಳೆದುಕೊಂಡಿದ್ದೇವೆ. ಪಕ್ಷ ಕಟ್ಟಲಿಕ್ಕೆ ಅವರ ಜೀವನವೇ ಒಂದು ಮಾದರಿ ಎಂದು ನಾನು ತಿಳಿದುಕೊಳ್ಳುತ್ತೇನೆ.

ಮತ್ತೆ, ವಿಶೇಷವಾಗಿ ಸಭಾನಾಯಕರು ತಿಳಿಸಿದಂತೆ ಹೆಣ್ಣುಮಕ್ಕಳ ಮೇಲೆ ಆದಂತಹ ದೌರ್ಜನ್ಯ ಸಂದರ್ಭದಲ್ಲಿ ಅಶ್ಲೀಲ ಭಿತ್ತಿ ಚಿತ್ರಗಳು, ಹೆಣ್ಣು ಮಕ್ಕಳ ಮೇಲೆ ಅತ್ಯಾಚಾರವಾದಂತಹ ಸಂದರ್ಭದಲ್ಲಿ ಅವರು ಒಂದು ರೀತಿಯಲ್ಲಿ ದುರ್ಗಿ ರೂಪದಲ್ಲಿಯೇ ನುಗ್ಗಿ ಬಿಡುತ್ತಿದ್ದರು. ಇಡೀ ಸದನ ಅವರು ಮಾತನಾಡುತ್ತಿದ್ದಂತಹ ಸಂದರ್ಭದಲ್ಲಿ ನಮಗೂ ಕೂಡ ಒಂದು ರೀತಿಯಲ್ಲಿ ಕುಟುಂಬದವರಿಗೆ ಏನೋ ಅನ್ಯಾಯವಾದಂತಹ ಸಂದರ್ಭದಲ್ಲಿ ಏನು ಅವರು ಆಕ್ರೋಶವನ್ನು ವ್ಯಕ್ತ ಮಾಡುತ್ತಿದ್ದರು ಎನ್ನುವುದು ನಮಗೂ ಅನಿಸುತ್ತಿತ್ತು. ಇಂತಹ ವಿಮಲಕ್ಕನವರನ್ನು ನಾವು ಇಂದು ಕಳೆದುಕೊಂಡಿದ್ದೇವೆ. ವಿಮಲಕ್ಕನವರು ಯಾವ ಒಂದು ದಾರಿಯಲ್ಲಿ ಹೋಗುತ್ತಿದ್ದರು, ಅವರು ಏನು ಕನಸು ಕಂಡಿದ್ದರು, ಆ ದಾರಿಯಲ್ಲಿ ನಾವು ಸಹ ಹೋಗುತ್ತೇವೆ, ಅವರ ಕನಸನ್ನು ನನಸು ಮಾಡುವುದಕ್ಕೆ ಖಂಡಿತವಾಗಿಯೂ ಸಹ ನಾವು ಪ್ರಯತ್ನ ಮಾಡುತ್ತೇವೆಂದು ಹೇಳುತ್ತಾ, ಸ್ವರ್ಗದಲ್ಲಿರುವಂತಹ ವಿಮಲಕ್ಕನವರ ಆತ್ಮಕ್ಕೆ ಈ ಸಂದರ್ಭದಲ್ಲಿ ಶಾಂತಿಯನ್ನು ಆ ಭಗವಂತನು ಕರುಣಿಸಲೆಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ.

**ಡಾ॥ ಹೊ. ಶ್ರೀನಿವಾಸಯ್ಯನವರು** ಒಬ್ಬ ಮೆಕ್ಯಾನಿಕಲ್ ಇಂಜಿನಿಯರ್ ಆಗಿ, ಸ್ವಾತಂತ್ರ್ಯಕ್ಕೋಸ್ಕರ ಹೋರಾಟ ಮಾಡಿದಂತಹ ವ್ಯಕ್ತಿ, ಗಾಂಧಿವಾದಿಯಾಗಿ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷರಾಗಿ ಅವರು ಮಾಡಿದಂತಹ ಸೇವೆಯ ಬಗ್ಗೆ ನಿಜಕ್ಕೂ ಕೂಡ ನಾವು ಈಗ ನೆನಪು ಮಾಡಿಕೊಳ್ಳಬೇಕು. ಸ್ವಾತಂತ್ರ್ಯಕ್ಕೋಸ್ಕರ ಹೋರಾಟ ಮಾಡುತ್ತಿದ್ದರು, ಎಂದು ಹೇಳಿದರೆ ಅ ಒಂದು ಹೋರಾಟದಲ್ಲಿ ನಾವುಗಳು ಯಾರೂ ಸಹ ಭಾಗವಹಿಸಲಿಲ್ಲ. ಆದರೆ, ಸ್ವಾತಂತ್ರ್ಯಕ್ಕೋಸ್ಕರ ಹೋರಾಟ ಮಾಡಿದವರ ಕಲ್ಪನೆ, “ರಸ್ತೆ ಮಾಡು, ಚರಂಡಿ ಮಾಡು, ಕುಡಿಯುವುದಕ್ಕೆ ನೀರು ಕೊಡು” ಎನ್ನುವುದಲ್ಲ. ಪ್ರಪಂಚದಲ್ಲಿ ನಮ್ಮ ಭಾರತ ಒಂದು ಉತ್ಕೃಷ್ಟವಾದ ದೇಶವಾಗಬೇಕೆನ್ನುವ ಕಲ್ಪನೆಯನ್ನಿಟ್ಟುಕೊಂಡು ಸ್ವಾತಂತ್ರ್ಯಕ್ಕೋಸ್ಕರ

ಹೋರಾಟ ಮಾಡಿದಂತಹವರು. ಅಂತಹ ಸ್ವಾತಂತ್ರ್ಯಕ್ಕೋಸಕ್ಕರ ಹೋರಾಟ ಮಾಡಿದಂತಹ ಶ್ರೀಯುತರಿಗೆ ರಾಜ್ಯ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕರ್ನಾಟಕ ಸರ್ಕಾರದ ಪತಂಜಲಿ ಸುವರ್ಣ ಪದಕ, ರಾಜ್ಯೋತ್ಸವ ಪ್ರಶಸ್ತಿ, ಈ ರೀತಿ ಅನೇಕ ಪ್ರಶಸ್ತಿಗಳು, ಗೌರವ ಡಾಕ್ಟರೇಟ್‌ಗಳು ಸಿಕ್ಕಿದ್ದು ನಿಜಕ್ಕೂ ಕೂಡ ನಮಗೆಲ್ಲರಿಗೂ ಹೆಮ್ಮೆ. ಅಂತಹ ಒಬ್ಬ ಸ್ವಾತಂತ್ರ್ಯ ಹೋರಾಟಗಾರರನ್ನು ನಾವು ಕಳೆದಕೊಂಡಿದ್ದೇವೆನ್ನುವ ದು:ಖ ನಮ್ಮೆಲ್ಲರಿಗೂ ಇದೆ.

**ಪ್ರೊ. ಕೆ.ಟಿ. ಪಾಂಡುರಂಗಿ ರವರ ಬಗ್ಗೆ** ಹೇಳುವುದಾದರೆ, ಸಂಸ್ಕೃತಕ್ಕೋಸರ ತಮ್ಮ ಜೀವನವನ್ನೇ ಮುಡುಪಾಗಿಟ್ಟಿದ್ದಾರೆಂದು ನಾನು ಕಾಲೇಜು ದಿನಗಳಲ್ಲಿಯೇ ಕೇಳಿದ್ದೆ. ಸಂಸ್ಕೃತ ಮೃತ ಭಾಷೆಯೆಂದು ಅನೇಕ ಜನರು ಟೀಕೆ ಮಾಡುತ್ತಾರೆ. ಶಿವಮೊಗ್ಗದ ಹತ್ತಿರ 'ಮತ್ತೂರು' ಎನ್ನುವ ಒಂದು ಗ್ರಾಮ ಇದೆ. ಆ ಮತ್ತೂರು ಗ್ರಾಮದಲ್ಲಿ ದಲಿತರು, ಹಿಂದುಳಿದವರು, ಹೀಗೆ ಎಲ್ಲಾ ಜಾತಿಯವರು ಸಂಸ್ಕೃತ ಮಾತನಾಡುತ್ತಾರೆ. ಈ ರೀತಿಯಲ್ಲಿ ಪ್ರೊ. ಕೆ.ಟಿ. ಪಾಂಡುರಂಗಿ ರವರು ಅಲ್ಲಿಗೂ ಬಂದಿದ್ದರು. ಆ ಸಂದರ್ಭದಲ್ಲಿ ನಾವೆಲ್ಲರೂ ಅವರನ್ನು ಭೇಟಿ ಕೂಡ ಮಾಡಿದ್ದೆವು. ಅಂತಹ ಒಬ್ಬ ವಿದ್ಯಾಂಸರನ್ನು ನಾವು ಇಂದು ಕಳೆದುಕೊಂಡಿದ್ದೇವೆ. ಅವರಿಗೂ ಕೂಡ ರಾಷ್ಟ್ರ ಪ್ರಶಸ್ತಿ, ರಾಜ್ಯ ಪ್ರಶಸ್ತಿಗಳು ಲಭಿಸಿವೆ. ಕನ್ನಡದಲ್ಲೂ ಕೂಡ ಅವರು ಕಾವ್ಯ ಶಾಸ್ತ್ರಗಳನ್ನು ರಚನೆ ಮಾಡಿದ್ದರೆಂದು ಕೇಳಿ ನಮಗೆಲ್ಲರಿಗೂ ಸಂತೋಷವಾಗಿದೆ. ಇಂತಹ ಒಬ್ಬ ಖ್ಯಾತ ವಿದ್ಯಾಂಸರನ್ನು ನಾವು ಕಳೆದುಕೊಂಡಿದ್ದೇವೆ.

**ಮತ್ತೆ, ಶ್ರೀ ಗರುಡನಗಿರಿ ನಾಗರಾಜ** ಎನ್ನುವಂತಹ ಒಬ್ಬ ಖ್ಯಾತ ಹಿರಿಯ ಪತ್ರಕರ್ತರನ್ನು ನಾವು ಕಳೆದುಕೊಂಡಿದ್ದೇವೆ. ಪತ್ರಕರ್ತರೆಂದು ಸ್ವಾಭಾವಿಕವಾಗಿ, ಅವರ ಬಗ್ಗೆ ನಮಗೆ ಗೌರವ ಬಂದೇ ಬರುತ್ತದೆ. ಹಿರಿಯ ಪತ್ರಕರ್ತರಾಗಿದ್ದಂತಹ ಅವರು ಮೊದಲನೆಯ ಬಾರಿಗೆ ನಾನು ವಿಧಾನಸಭೆಗೆ ಬಂದಾಗ ಯಾವ ರೀತಿಯಲ್ಲಿ ಕೆಲಸ ಮಾಡಬೇಕೆನ್ನುವ ಬಗ್ಗೆ ಅವರ ಹತ್ತಿರ ನಾವು ಹೋಗಿ ಕುಳಿತಂತಹ ಸಂದರ್ಭದಲ್ಲಿ ಹೇಳುತ್ತಿದ್ದರು. ಈ ರೀತಿಯಲ್ಲಿ ಪತ್ರಕರ್ತರಾಗಿ ಶಾಸಕರುಗಳಿಗೆ, ರಾಜಕಾರಣಿಗಳಿಗೆ ಧೈರ್ಯವಾಗಿ ಮಾರ್ಗದರ್ಶನ ಮಾಡುತ್ತಿದ್ದಂತಹ ಶ್ರೀಯುತರನ್ನು ನಾವು ಇಂದು ಕಳೆದುಕೊಂಡಿದ್ದೇವೆ.

**ಶ್ರೀಮತಿ ಪಾರ್ವತಮ್ಮ ರಾಜ್‌ಕುಮಾರ್‌ರವರು** ನೇರವಾಗಿ ಚಿತ್ರಗಳಲ್ಲಿ ನಟನೆ ಮಾಡದಿದ್ದರೂ ಕೂಡ ಅನೇಕ ಚಿತ್ರ ನಟರಿಗೆ ಒಂದು ರೀತಿಯ ಸ್ಫೂರ್ತಿ. ಅವರು ಪ್ರೇರಣೆ ಕೊಟ್ಟು, ನೀವು ಚಿತ್ರರಂಗದಲ್ಲಿ ಕೆಲಸ ಮಾಡಿ, ನಾವು ನಿಮ್ಮ ಜೊತೆಯಲ್ಲಿ ಇರುತ್ತೇವೆಂದು ಧೈರ್ಯವನ್ನು ಕೊಡುತ್ತಿದ್ದರು ಎನ್ನುವ ವಿಚಾರವನ್ನು ನಾನು ನನ್ನ ಸ್ನೇಹಿತರ ಮೂಲಕ ಕೇಳಿದ್ದೇನೆ. ಒಂದು ಸಂತೋಷದ ವಿಚಾರ

ಏನೆಂದರೆ, ನಿರ್ಗತಿಕ ಮಹಿಳೆ ಮತ್ತು ಮಕ್ಕಳಿಗೆ ಆಶ್ರಯ ಒದಗಿಸಲು ಮೈಸೂರಿನಲ್ಲಿ "ಶಕ್ತಿಧಾಮ" ಕೇಂದ್ರವನ್ನು ಸ್ಥಾಪಿಸಿದ್ದರೆಂದು ಕೇಳಿ ತುಂಬಾ ಸಂತೋಷವಾಗಿದೆ. ಹಿರಿಯ ಚಲನಚಿತ್ರ ನಿರ್ಮಾಪಕರಲ್ಲಿ ಒಬ್ಬರಾಗಿದ್ದಂತಹ ಶ್ರೀಮತಿ ಪಾರ್ವತಮ್ಮ ರಾಜ್‌ಕುಮಾರ್‌ರವರನ್ನು ಕಳೆದುಕೊಂಡಿದ್ದೇವೆ. ಒಟ್ಟಾರೆ, ಈ ಎಲ್ಲಾ ಹಿರಿಯ ಚೇತನಗಳನ್ನು ಕಳೆದುಕೊಂಡಂತಹ ಕರ್ನಾಟಕ ರಾಜ್ಯ ಒಂದು ರೀತಿಯಲ್ಲಿ ಬಡವಾಗಿದೆ ಎನ್ನುವಂತಹ ಅಂಶವನ್ನು ಈ ಸಂದರ್ಭದಲ್ಲಿ ತಿಳಿಸುತ್ತಾ, ಇವರೆಲ್ಲರ ಆತ್ಮಕ್ಕೆ ಶಾಂತಿಯನ್ನು ಮತ್ತು ಅವರ ಕುಟುಂಬವರ್ಗದವರಿಗೆ ಆಗಿರುವಂತಹ ದು:ಖವನ್ನು ಭರಿಸುವಂತಹ ಶಕ್ತಿಯನ್ನು ಆ ಭಗವಂತ ಕರುಣಿಸಲೆಂದು ನಾನು ಪ್ರಾರ್ಥನೆ ಮಾಡುತ್ತೇನೆ.

**ಸಭಾಪತಿಯವರು:-** ಮೃತರ ಆತ್ಮಕ್ಕೆ ಸದ್ಗತಿಯನ್ನು ಕೋರುತ್ತಾ, ಅವರ ಅಗಲಿಕೆಯ ನೋವನ್ನು ಸಹಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ಪರಮಾತ್ಮನು ಕರುಣಿಸಲೆಂದು ಪ್ರಾರ್ಥಿಸುತ್ತೇನೆ. ಮೃತರ ಗೌರವಾರ್ಥ ಮಾನ್ಯ ಸದಸ್ಯರುಗಳು ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

**(ಈ ಹಂತದಲ್ಲಿ ಮೃತರ ಗೌರವಾರ್ಥ ಒಂದು ನಿಮಿಷ ಮಾನ್ಯ ಸದಸ್ಯರುಗಳೆಲ್ಲಾ ಎದ್ದು ನಿಂತು ಮೌನವನ್ನು ಆಚರಿಸಿದರು)**

ಸದನದಲ್ಲಿ ಪ್ರಸ್ತಾಪಿಸಿದ ಸಂತಾಪ ಸೂಚನೆಯನ್ನು ಮೃತ ಗಣ್ಯರ ಕುಟುಂಬ ವರ್ಗದವರಿಗೆ ಕಳುಹಿಸಲಾಗುವುದು.

(542) 05.06.2017 SPR-KS(SP) 12.30

**(12–30 ಗಂಟೆ)**

**3. ಪ್ರಕಟಣೆಗಳು**

**ಮಾನ್ಯ ಸಭಾಪತಿಯವರು:-** ಈ ಸದನದಲ್ಲಿ ಸರ್ಕಾರವು ಈಗಾಗಲೇ ಪ್ರಸ್ತಾಪಿಸಿದಂತೆ ಜಿ.ಎಸ್.ಟಿ. ವಿಧೇಯಕವನ್ನು ಜಾರಿಗೆ ತರುತ್ತಿದೆ. ಈ ಜಿ.ಎಸ್.ಟಿ. ವಿಧೇಯಕ ಬಗೆಗಿನ ವಿಷಯಗಳನ್ನು ತಿಳಿದುಕೊಳ್ಳುವುದಕ್ಕೆ ಬಹಳಷ್ಟು ಜನರಿಗೆ ತಮ್ಮದೇ ಆದ ಕುತೂಹಲ, ಆಸೆಗಳಿವೆ. ಹೀಗಾಗಿ ನಮ್ಮ ವಿಧಾನ ಪರಿಷತ್ತಿನ ಸದಸ್ಯರುಗಳಿಗಾಗಿ ನಾಳೆಯ ದಿವಸ ಬೆಳಿಗ್ಗೆ 10.30 ಗಂಟೆಯಿಂದ ಸುಮಾರು 12.30 ಅಥವಾ 1.00 ಗಂಟೆಯವರೆಗೆ ಜಿ.ಎಸ್.ಟಿ. ವಿಧೇಯಕದ ಬಗ್ಗೆ ಉಪನ್ಯಾಸ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ. PRS Legislative Research Institute, New Delhi ರವರು ಈ ಕಾರ್ಯಕ್ರಮವನ್ನು ನಡೆಸಿಕೊಡುತ್ತಾರೆ. ಕಾರ್ಯಕ್ರಮವನ್ನು ವಿಕಾಸ ಸೌಧದ ಕೊಠಡಿ ಸಂಖ್ಯೆ 419 ರಲ್ಲಿ ನಡೆಸಲಾಗುವುದು.

ನಮ್ಮ ಸದನದ ಎಲ್ಲಾ ಗೌರವಾನ್ವಿತ ಸದಸ್ಯರುಗಳು ಈ ಅವಕಾಶದ ಸದುಪಯೋಗವನ್ನು ಪಡೆದುಕೊಳ್ಳಬೇಕೆಂದು ನಾನು ವಿನಂತಿಸುತ್ತೇನೆ.

**ಶ್ರೀ ಹೆಚ್.ಎಂ.ರೇವಣ್ಣ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಸದರಿ ವಿಧೇಯಕದ ಪ್ರತಿಯನ್ನು ಕೊಟ್ಟರೆ ಚರ್ಚೆಗೆ ಅನುಕೂಲವಾಗುತ್ತದೆ.

**Mr.CHAIRMAN:-** You are hundred per cent right. ಸದರಿ ವಿಧೇಯಕದ ಪ್ರತಿಯನ್ನು ಒದಗಿಸುವಂತೆ ಸರ್ಕಾರಕ್ಕೆ ನಾನು ಇವತ್ತಿನ ದಿವಸವೇ ಪ್ರಯತ್ನ ಮಾಡುತ್ತೇನೆ. ವಿಧೇಯಕದ ಪ್ರತಿಯನ್ನು ಒದಗಿಸುವುದು ಸರ್ಕಾರದ ಜವಾಬ್ದಾರಿಯಾಗಿದೆ. ನಾನು ನಮ್ಮ ಸಭಾನಾಯಕರ ಮೂಲಕ ಅದರ ಪ್ರತಿಗಳನ್ನು ಒದಗಿಸುವಂತೆ ಕೇಳುತ್ತೇನೆ. ನಾಳೆ ಬೆಳಿಗ್ಗೆ 10.30 ಗಂಟೆಗೆ ಸರಿಯಾಗಿ ಕಾರ್ಯಕ್ರಮವು ಪ್ರಾರಂಭಗೊಳ್ಳುತ್ತದೆ. ಏಕೆಂದರೆ ಕಾರ್ಯಕ್ರಮದ ಆಯೋಜಕರು ತಮಗೆ ಕನಿಷ್ಠವಾಗಿ ಎರಡು–ಎರಡೂವರೆ ಗಂಟೆಗಳು ಅವಶ್ಯಕವಾಗಿದೆಂದು ಹೇಳಿದ್ದಾರೆ. ಸದರಿ ಕಾರ್ಯಕ್ರಮದಲ್ಲಿ ಪ್ರಶ್ನೋತ್ತರಕ್ಕೂ ಅವಕಾಶವಿದೆ. ತುಂಬಾ ಅನುಭವಸ್ಥ ಆಯೋಜಕರನ್ನು ಆಹ್ವಾನಿಸಲಾಗಿದೆ. ನಮ್ಮ ಸರ್ಕಾರಿ ಮುಖ್ಯ ಸಚೇತಕರು ಹಾಗೂ ವಿರೋಧ ಪಕ್ಷದ ಮುಖ್ಯ ಸಚೇತಕರವರುಗಳು ಸೇರಿಕೊಂಡು ಈ ಕಾರ್ಯಕ್ರಮವನ್ನು ಆಯೋಜಿಸಿದ್ದಾರೆ ಹಾಗೂ ಕಾರ್ಯಕ್ರಮದ ಎಲ್ಲಾ ಅಂಶಗಳ ಬಗ್ಗೆ ಆಯೋಜಕರು ಬಳಿ ಚರ್ಚೆಯನ್ನೂ ಸಹ ಮಾಡಿದ್ದಾರೆ. ನನಗೆ ಗೊತ್ತಿರುವ ವಿಷಯವನ್ನು ತಮಗೆ ನಿವೇದಿಸಲಾಗಿದೆ.

ಇನ್ನೊಂದು ಪ್ರಕಟಣೆ ಏನೆಂದರೆ, ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ಇವತ್ತಿನ ಸಂಜೆ 4.00 ಗಂಟೆಗೆ ರಾಷ್ಟ್ರೀಯ ಸೈನಿಕ ಸ್ಮಾರಕದಲ್ಲಿ ಗಿಡ ನೆಡುವ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಸದರಿ ಕಾರ್ಯಕ್ರಮಕ್ಕೆ ಸದಸ್ಯರುಗಳೆಲ್ಲಾ ಪಾಲ್ಗೊಳ್ಳಬೇಕು ಎನ್ನುವ ಮಾತನ್ನು ಹೇಳುತ್ತೇನೆ. ಮೃತ ನಮ್ಮ ಸದನದ ಗೌರವಾನ್ವಿತ ಸದಸ್ಯರು ನಮ್ಮನ್ನಗಲಿದ್ದಾರೆ. ಮನಸ್ಸಿಗೆ ನೋವುಂಟಾಗಿದೆ. ಸದರಿ ಸದಸ್ಯರ ಜೊತೆಗೆ ನಾವು ಇತರೆ ಮೃತ ಗಣ್ಯರನ್ನೂ ಸಹ ನೆನಪು ಮಾಡಿಕೊಂಡಿದ್ದೇವೆ. ಅವರೆಲ್ಲರ ಗೌರವಾರ್ಥ ಸದನವನ್ನು ನಾಳೆ ಮಧ್ಯಾಹ್ನ 3.00 ಗಂಟೆಯವರೆಗೆ ಮುಂದೂಡಲಾಗಿದೆ.

**(ಸದನವು ಮಧ್ಯಾಹ್ನ 12 ಗಂಟೆ 32 ನಿಮಿಷಕ್ಕೆ ಮುಕ್ತಾಯಗೊಂಡು ಪುನ: ದಿನಾಂಕ 06ನೇ ಜೂನ್ ಮಾಹೆಯ 2017ರ ಮಂಗಳವಾರದಂದು ಮಧ್ಯಾಹ್ನ 3.00 ಗಂಟೆಗೆ ಸೇರಲು ನಿಶ್ಚಯಿಸಿತು)**

– – – – –